**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು):–** ಮಾನ್ಯ ಅಧ್ಯಕ್ಷರೆ, ದಿನಾಂಕ 23.07.2008 ರಂದು 03ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 23 ಪ್ರಶ್ನೆಗಳ ಪೈಕಿ 21 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಅಧ್ಯಕ್ಷರು:–** ಮಂಡಿಸಲಾಯಿತು. ಅನುಬಂಧ–1

**3. ಚುನಾವಣಾ ಪ್ರಸ್ತಾವ**

**ವಿಷಯ:–** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥಾಪನಾ ಮಂಡಳಿಗೆ ಇಬ್ಬರನ್ನು ಸದಸ್ಯರನ್ನಾಗಿ ನೇಮಿಸುವ ಬಗ್ಗೆ:

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರ ಪರವಾಗಿ):–

**ಮಾನ್ಯ ಅಧ್ಯಕ್ಷರೆ:–**

ಅ. 1992ನೇ ಇಸವಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಯಮಾವಳಿ ನಿಯಮ 18(1) (8) ರ ಪ್ರಕಾರ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥಾಪನಾ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಆ. 1965ರ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ಕಲಂ–3ರ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಅಧ್ಯಕ್ಷರು:–** ಮಂಡಿಸಲಾಯಿತು.

**4. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸತಕ್ಕ ವಿಷಯಗಳು**

**ವಿಷಯ:–** ಸಂಸತ್ ಸದಸ್ಯರಾದ ಮಾನ್ಯ ಹೆಚ್.ಟಿ. ಸಾಂಗ್ಲಿಯಾನ ಅವರ ಕಛೇರಿಯ ಮೇಲೆ ದಾಳಿ ನಡೆದಿರುವ ಬಗ್ಗೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):–** ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅಪ್ಪಣೆ ಪಡೆದು important ವಿಷಯವೊಂದನ್ನು ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಇತ್ತೀಚೆಗೆ ವಿಶೇಷವಾಗಿ ಕೇಂದ್ರದಲ್ಲಿ ನಿನ್ನೆ trust vote ಅನ್ನು ತೆಗೆದುಕೊಳ್ಳತಕ್ಕ ಪ್ರಸಂಗ ಬಂತು, ಆ ಸಂದರ್ಭದಲ್ಲಿ ಕೆಲವು ಕರ್ನಾಟಕ ರಾಜ್ಯದ Parliament ಸದಸ್ಯರು UPA ಸರ್ಕಾರಕ್ಕೆ ಬೆಂಬಲವನ್ನು ಕೊಟ್ಟಿದ್ದಾರೆ ಎನ್ನತಕ್ಕಂಥ ಒಂದು ಮಾತಿನ ಮೇಲೆ ಕೆಲವು ಜನ ಅದರಲ್ಲಿಯೂ ವಿಶೇಷವಾಗಿ ನಮಗೆ ಮಾಹಿತಿ BJP activist ಎಂದು ಬಂದಿದೆ, ಅದನ್ನು ಮಾನ್ಯ ಮುಖ್ಯಮಂತ್ರಿಗಳು verify ಮಾಡಬೇಕು. ಮಾನ್ಯ ಸಾಂಗ್ಲಿಯಾನ ಅವರ office ಮೇಲೆ attack ಮಾಡಿ, ಕಲ್ಲು ಹೊಡೆದು, ಅಲ್ಲಿ ಸಾಕಷ್ಟು ಗಲಾಟೆಯನ್ನು ಮಾಡಿದ್ದಾರೆ ಎಂಬ ವರ್ತಮಾನ ಈಗ ನನಗೆ ಬಂದಿದೆ, ನೇರವಾಗಿ attack ಮಾಡತಕ್ಕದ್ದು ಸರಿಯಲ್ಲ. Protest ಮಾಡಲಿ, ಯಾರೋ ಒಬ್ಬರು ನಿಮ್ಮನ್ನು ಬಿಟ್ಟು ಹೋಗಿದ್ದಾರೆ ಎಂದು ಶಾಂತಿಯುತವಾಗಿ Protest ಮಾಡುವುದು, ಧಿಕ್ಕರಿಸುವುದು ಅಥವಾ procession ಮಾಡತಕ್ಕದ್ದು ಸಹಜ. ಅನೇಕ ಜನ ಮಾಡುತ್ತಾರೆ, ನೀವೂ ಮಾಡಿ. ಅದರಲ್ಲೇನೂ ತಪ್ಪಿಲ್ಲ. ಆದರೆ Physically officeಗಳನ್ನು attack ಮಾಡುವುದು, ಕಲ್ಲು ತೆಗೆದುಕೊಂಡು ಹೊಡೆಯುವುದು, ಕಾನೂನನ್ನು ಕೈಯಲ್ಲಿ ತೆಗೆದುಕೊಂಡು ಈ ರೀತಿ ಧಮಕಿಗಳನ್ನು ಕೊಡತಕ್ಕದ್ದಾದರೆ, ಅದು ಒಳ್ಳೆಯದಲ್ಲ. ನೀವೇನು ಚಾಳಿ ಹಾಕಿ ಕೊಟ್ಟಿದ್ದೀರಿ, ಅದರ ಪರಿಣಾಮ ಇವತ್ತು ಅನುಭವಿಸಬೇಕಾಗುತ್ತದೆ. ಎಂದು ನಾನು ಮೊದಲೇ ಹೇಳಿದ್ದೆ. ಅದನ್ನು ಈಗ ನೀವು ಅನುಭವಿಸಿದಿರಿ. ಕೊನೆಗೆ ಅಂತಿಮವಾಗಿ UPA ಸರ್ಕಾರಕ್ಕೆ ಜಯ ಆಯಿತು, ಅದು ಇರಲಿ, ಆದರೆ ಒಬ್ಬ ವ್ಯಕ್ತಿಗೆ ವ್ಯಕ್ತಿ ಸ್ವಾತಂತ್ರ್ಯ ಇದೆ. ಇವತ್ತು ಅವರು ಮತ ಹಾಕಿರಬಹುದು. ಆದರೆ ಅವರ office ಮೇಲೆ attack ಮಾಡತಕ್ಕದ್ದು, physically man handle ಮಾಡತಕ್ಕದ್ದು, threaten ಮಾಡತಕ್ಕದ್ದು, ಸರಿಯಲ್ಲ. ಅದಕ್ಕಾಗಿ ತಕ್ಷಣ ಅವರಿಗೆ ಪೊಲೀಸ್ protection ಕೊಡಬೇಕು. ತಕ್ಷಣ ಸಾರ್ವಜನಿಕರ ಆಸ್ತಿಪಾಸ್ತಿ ಹಾಳಾಗದಂತೆ ನೋಡಿಕೊಳ್ಳಬೇಕು ಮತ್ತು ಇವತ್ತು ಅವರ ಕಚೇರಿಯ ಮೇಲೆ attack ಮಾಡುವ ಪ್ರಯತ್ನಗಳು ಏನು ನಡೆದಿವೆ ಅವರೆಲ್ಲರನ್ನು ಕೂಡ arrest ಮಾಡಬೇಕು. ಇಲ್ಲವೆಂದರೆ ಹೆದರಿಕೆ ಇರುವುದಿಲ್ಲ, ಯಾರು ಏನು ಬೇಕಾದರೂ ಮಾಡಬಹುದು, ಮತ್ತೆ ನೇರವಾಗಿ ನೀವೇ ಗುಂಡಾಕುವುದು, ಕಲ್ಲು ಹೊಡೆಯುವುದಿದ್ದರೆ ಪೊಲೀಸ್ ಏತಕ್ಕೆ ಬೇಕು, ಸರ್ಕಾರ ಏತಕ್ಕೆ ಬೇಕು, ಆಡಳಿತ ಏತಕ್ಕೆ ಬೇಕು, ಕಾನೂನು ಏತಕ್ಕೆ ಬೇಕು, ಪೊಲೀಸ್ ಸ್ಟೇಷನ್ ಗಳು ಏತಕ್ಕೆ ಬೇಕು. ಅದಕ್ಕೆ ನಿಜವಾಗಿಯೂ ನಾವೆಲ್ಲರೂ ಇದನ್ನು

ಖಂಡಿಸತಕ್ಕಂತಹ ಸ್ಥಿತಿ ಇದೆ ಮತ್ತು ಇಂತಹ ಘಟನೆಗಳನ್ನು ನಾವು ಖಂಡನೆ ಮಾಡಲೇಬೇಕು. ಒಬ್ಬ ಪಾರ್ಲಿಮೆಂಟ್ ಸದಸ್ಯನಿಗೆ ರಕ್ಷಣೆ ಇಲ್ಲವೆಂದರೆ ಒಂದು ದೊಡ್ಡ ಅನಾಹುತವನ್ನು ನಾವೇ ತಂದುಕೊಳ್ಳುತ್ತಿದ್ದೇವೆ ಎಂಬುದಾಗುತ್ತದೆ. ಅದಕ್ಕೆ, ನಾನು ದಯವಿಟ್ಟು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ತಕ್ಷಣ ಇದರ ವ್ಯವಸ್ಥೆಯಾಗಬೇಕು, ಮತ್ತೆ ಯಾರು ಕಾನೂನನ್ನು ಕೈಗೆತ್ತಿಕೊಳ್ಳುತ್ತಾರೋ ಅವರನ್ನು ಶಿಕ್ಷೆಗೆ ಗುರಿಪಡಿಸಬೇಕು, ಅವರ ಮೇಲೆ ಕಣ್ಣಿಟ್ಟು ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ, ಇದಕ್ಕೆ ಕೌಂಟರ್ ಆಗಿ ಬೇರೆಯವರು ಮಾಡುವುದಕ್ಕೆ ಆರಂಭ ಮಾಡುತ್ತಾರೆ, ಅದು ನಿಮಗೆ ಬೇಕೆಂದರೆ ಆ ವಿಚಾರ ಬೇರೆ. ದಯವಿಟ್ಟು ಶಾಂತ ರೀತಿಯಿಂದ ಇರಬೇಕೆಂಬ ಸ್ವಇಚ್ಛೆಯಿಂದ ಇಲ್ಲಿ ವ್ಯವಸ್ಥೆಯನ್ನು ಕಾಪಾಡಿಕೊಳ್ಳಿ. ಇಲ್ಲದಿದ್ದರೆ, ನಾಳೆ ಎಲ್ಲರಿಗೂ ತೊಂದರೆಯಾಗುತ್ತದೆಂಬ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):**– ಅಧ್ಯಕ್ಷರೆ, ಮಾನ್ಯ ಸಾಂಗ್ಲಿಯಾನರವರಿಗೆ ಸರ್ಕಾರ ಸೂಕ್ತ ರಕ್ಷಣೆಯನ್ನು ಕೊಡುತ್ತದೆ ಮತ್ತೆ ಯಾರು ಕಾನೂನನ್ನು ಕೈಗೆತ್ತಿಕೊಳ್ಳುತ್ತಾರೆ ಅವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಆದೇಶ ಮಾಡುತ್ತೇನೆ

**ಅಧ್ಯಕ್ಷರು:**– ಈಗ ಗಮನ ಸೆಳೆಯುವ ಸೂಚನೆಗಳು, ಮಾನ್ಯ ಡಿ.ಕೆ. ಶಿವಕುಮಾರ್ ಅವರು ಬಂದಿಲ್ಲ, ಧ್ರುವನಾರಾಯಣ್‌ರವರು ಕೇಳುವುದು.

## 5. ಗಮನ ಸೆಳೆಯುವ ಸೂಚನೆಗಳು

**5. ವಿಷಯ:** ಮೈಸೂರು ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರ ನೇಮಕಾತಿಯಲ್ಲಿ ಯು.ಜಿ.ಸಿ ನಿಯಮ ಉಲ್ಲಂಘನೆಯಾಗಿರುವ ಬಗ್ಗೆ.

**ಶ್ರೀ ಆರ್. ಧ್ರುವನಾರಾಯಣ್ (ಕೊಳ್ಳೇಗಾಲ):**– ಅಧ್ಯಕ್ಷರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರು, ರೀಡರ್ ಮತ್ತು ಪ್ರೊಫೆಸರ್ ಹುದ್ದೆಗಳ ನೇಮಕಾತಿಯಲ್ಲಿ ಯು.ಜಿ.ಸಿ. ನಿಯಮ ಉಲ್ಲಂಘನೆಯಾಗಿರುವ ಬಗ್ಗೆ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ** (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):– ಅಧ್ಯಕ್ಷರೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ದೆಹಲಿಯಲ್ಲಿ ನಡೆಯುತ್ತಿರುವ, ಉನ್ನತ ಶಿಕ್ಷಣ